ISSN : 3048-7137

ಆರಯ್

ಕನ್ನಡ ಇಮ್ಮುಖ ಕುರುಡೋದು (Double Blind) ಮತ್ತು ದಟ್ಟೋದು (Peer Review) ಮೂರು ತಿಂಗಳ ಆನ್ಲಯಿನ್ ಸಂಶೋಧನಾ ಪತ್ರಿಕೆ

ಸಂಪುಟ–೨ ಸಂಚಿಕೆ–೨

ಏಪ್ರಿಲ್-ಜೂನ್ ೨೦೨೫

Kannada Online Double Blind Peer-Review Quarterly Research Journal

Volume-2, Number-2 April-June 2025

ಕಟ್ಟುಗ

ಬಸವರಾಜ ಕೋಡಗುಂಟಿ

ಬಂಡಾರ ಪ್ರಕಾಶನ

ಮಸ್ಕಿ

ಆರಯ್

ಕನ್ನಡ ಇಮ್ಮುಖ ಕುರುಡೋದು (Double Blind) ಮತ್ತು ದಟ್ಟೋದು (Peer Review) ಮೂರು ತಿಂಗಳ ಆನ್ಲಯಿನ್ ಸಂಶೋಧನಾ ಪತ್ರಿಕೆ

ಸಂಪುಟ–೨, ಸಂಚಿಕೆ–೨, ಏಪ್ರಿಲ್–ಜೂನ್ ೨೦೨೫

ISSN : 3048-7137

ARAY

Kannada Online Double Blind Peer-Review Quarterly Research Journal

Volume-2, Number-2, April-June 2025

https://aray.in/

ಪುಟ/Pages : 134

ಹಕ್ಕು/@: ಪ್ರಕಾಶಕರು

ಬೆಲೆ/Price : **ರೂ. 50/–**

ಸಂಪಾದಕ
ಪ್ರೊ. ಬಸವರಾಜ ಕೋಡಗುಂಟಿ

ಅತಿಥಿ ಸಂಪಾದಕ
ಪ್ರೊ. ಕೆ. ಶಾರದಾ

ಸಲಹಾ ಮಂಡಳಿ
ಪ್ರೊ. ಪುರುಷೋತ್ತಮ ಬಿಳಿಮಲೆ, ಪ್ರೊ. ನಟರಾಜ್ ಬೂದಾಳ್
ಪ್ರೊ. ಸತ್ಯನಾಥ್ ಟಿ.ಎಸ್. ಪ್ರೊ. ಶ್ರೀನಿವಾಸ ವಿ. ಪಾಡಿಗಾರ, ಪ್ರೊ. ಶ್ರೀಧರ್ ಎಸ್.ಎನ್.

ಸಂಪಾದಕ ಮಂಡಳಿ
ಪ್ರೊ. ಚೈತ್ರಾ ಪುಟ್ಟಸ್ವಾಮಿ, ಪ್ರೊ. ಮನು ವಿ ದೇವದೇವನ್
ಪ್ರೊ. ಗಿಲ್ ಬೆನ್–ಹೆರುತ್, ಪ್ರೊ. ತಾರಕೇಶ್ವರ್ ವಿ.ಬಿ., ಪ್ರೊ. ಪರಮಶಿವಮೂರ್ತಿ ಡಿ.ವಿ.

ಕಾರ್ಯಕಾರಿ ಮಂಡಳಿ
ಡಾ. ಮಲ್ಲೇಶಪ್ಪ ಸಿದ್ರಾಂಪುರ, ಡಾ. ರಾಮಕೃಷ್ಣ ಜಿ, ಡಾ. ಮಹಾಂತೇಶ ಪಾಟೀಲ್
ಡಾ. ಬಸಯ್ಯ ಸ್ವಾಮಿ, ಡಾ. ಮಧು ಬಿರಾದಾರ್, ಶ್ರೀ ರೇಣುಕಾ ಕೊಡಗುಂಟಿ

ಪ್ರಕಾಶಕರು

ಪರಶುರಾಮ ಕೋಡಗುಂಟಿ
ಪ್ರಕಾಶಕ, ಬಂಡಾರ ಪ್ರಕಾಶನ
ಮಸ್ಕಿ–೫೮೪ ೧೨೪, ಜಿ. ರಾಯಚೂರು
ಕರೆ–೯೧ ೯೪೪೮೭೪ ೦೭೦೧೧
bandaraprakashana@gmail.com
https://bandaraprakashana.com

ಪ ರಿ ವಿ ಡಿ

ಕಾಲದಲ್ಲಿ ಕಲೆಯ ಬಯಲಿನ ತೆಲುಗು ಬಯಲಾಟ **ಸ.ರಘುನಾಥ**	**4-13**
ಜನಪದ ರಂಗಭೂಮಿಯಲ್ಲಿ ಪುರಾಣ ಕಥಾನಕಗಳು: ಮರುಚಿಂತನೆ **ಡಿ.ಎಸ್.ಚೌಗಲೆ**	**14-22**
ಬಯಲಾಟಗಳಲ್ಲಿ ಮಹಿಳೆಯರು **ಅನಸೂಯ ಕಾಂಬಳೆ**	**23-37**
ಗಡಿನಾಡ ಬಯಲಾಟಗಳಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಅನನ್ಯತೆ **ಅರುಣ್ ಕುಮಾರ್ ಎಂ ಬಿ**	**38-48**
ಮಧ್ಯ ಕರ್ನಾಟಕ ಭಾಗದ ಬಯಲಾಟದ ಸ್ವರೂಪ ಮತ್ತು ಬಯಲಾಟದ ನೆಲೆಗಳು **ಚಿಕ್ಕಣ್ಣ ಯಣ್ಣೆಕಟ್ಟೆ**	**49-87**
ಚಕ್ರಬಿಂಬ ಕೋಟೆ: ಒಂದು ಪಾಠ್ಯಿಕ ವಿಶ್ಲೇಷಣೆ **ಡಾ. ಮುನಿರಾಜ ಎ.**	**88-98**
ನನ್ನೂರಿನ ನಾಟಕರಂಗ **ಹುಚ್ಚೇಗೌಡ ಎಚ್.**	**99-113**
ಆನೇಕಲ್ ತಾಲ್ಲೂಕಿನ ಕೇಳಿಕೆಗಳು **ಕೆ. ಮುನಿಯಪ್ಪ**	**114-121**
ಹೆಣ್ಣನ್ನು ಕಟಕಟೆಯಲ್ಲಿ ನಿಲ್ಲಿಸುವ ಚಿತ್ರಪಟ ರಾಮಾಯಣ **ಶ್ವೇತ ಜೆ.**	**122-130**

ISSN : 3048-7137

ಹೆಣ್ಣನ್ನು ಕಟಕಟೆಯಲ್ಲಿ ನಿಲ್ಲಿಸುವ ಚಿತ್ರಪಟ ರಾಮಾಯಣ

ಶ್ವೇತ ಜೆ.

ಸೂಚಕ ಪದಗಳು

ಚಿತ್ರಪಟ ರಾಮಾಯಣ, ಜನಪದ ರಾಮಾಯಣ, ಸೀತಾ ಪರಿತ್ಯಾಗ, ಪಾತಿವ್ರತ್ಯ, ಮಾತೃತ್ವ, ಪಿತೃಸತ್ತಾತ್ಮಕತೆ, ಸ್ತ್ರೀವಾದಿ ವಿಮರ್ಶೆ, ಲೈಂಗಿಕ ನಿಷ್ಠೆ, ಜನಪದ ಪ್ರಜ್ಞೆ, ಸಾಂಸ್ಕೃತಿಕ ರಾಜಕಾರಣ, ಹೆಣ್ಣಿನ ಪ್ರತಿನಿಧಿತ್ವ.

ಸಾರಲೇಖ: ಈ ಲೇಖನವು ಜನಪದದ ಚಿತ್ರಪಟ ರಾಮಾಯಣ ದೊಡ್ಡಾಟ ಪಠ್ಯವನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ವಿಮರ್ಶಾತ್ಮಕವಾಗಿ ವಿಶ್ಲೇಷಿಸುತ್ತದೆ. ಸೀತಾ ಪರಿತ್ಯಾಗದ ಪ್ರಸಂಗವನ್ನು ಕೇಂದ್ರವಾಗಿಟ್ಟುಕೊಂಡು, ಜನಪದ ರಾಮಾಯಣ ಕಥನಗಳಲ್ಲಿ ಹೆಣ್ಣಿನ ಪಾತಿವ್ರತ್ಯ, ಮಾತೃತ್ವ, ಲೈಂಗಿಕ ನಿಷ್ಠೆ ಮತ್ತು ಪಿತೃಸತ್ತಾತ್ಮಕ ಮೌಲ್ಯಗಳು ಹೇಗೆ ನಿರ್ಮಾಣಗೊಂಡು ಪ್ರತಿಪಾದನೆಗೊಳ್ಳುತ್ತವೆ ಎಂಬುದನ್ನು ಅನಾವರಣಗೊಳಿಸುತ್ತದೆ. ವಿಶೇಷವಾಗಿ ಸೂರ್ಪಣಕಿಯ ಪಾತ್ರದ ಮೂಲಕ ಸೀತೆಯ ಕುಟುಂಬ ಜೀವನವನ್ನು ಛಿದ್ರಗೊಳಿಸುವ ಕಥನ ವಿನ್ಯಾಸವನ್ನು ಇಲ್ಲಿ ಪರಿಶೀಲಿಸಲಾಗಿದೆ. ಈ ನಾಟಕದಲ್ಲಿ ರಾಮನನ್ನು ನಿರಪರಾಧಿಯನ್ನಾಗಿ ಹಾಗೂ ಸೀತೆಯನ್ನು ಪತಿವ್ರತೆಯ ಆದರ್ಶ ರೂಪವಾಗಿ ಚಿತ್ರಿಸುವ ಪ್ರಯತ್ನ ಕಂಡುಬರುತ್ತದೆ. ಅದೇ ಸಂದರ್ಭದಲ್ಲಿ

ಸೂರ್ಪನಕಿಯನ್ನು ಸಂಚುಗಾರ್ತಿ ಮತ್ತು ದುಷ್ಟ ಸ್ತ್ರೀಯ ಪ್ರತಿರೂಪವಾಗಿ ನಿರ್ಮಿಸಲಾಗಿದೆ. ಲೇಖನವು ಸೀತೆಯ ಮೇಲೆ ಹೊರಿಸಲಾದ ಅನುಮಾನ, ಅವಳ ಪಾತಿವ್ರತ್ಯದ ಅತಿರಂಜಿತ ಮಹಿಮೆ, ಬಂಜೆತನದ ಕುರಿತ ಸಾಮಾಜಿಕ ಪೂರ್ವಗ್ರಹಗಳು ಹಾಗೂ ಹೆಣ್ಣಿನ ಅಸ್ತಿತ್ವವನ್ನು ಮಾತೃತ್ವ ಮತ್ತು ಪತಿನಿಷ್ಠೆಯೊಂದಿಗೆ ಮಾತ್ರ ಗುರುತಿಸುವ ಮನೋವೃತ್ತಿಯನ್ನು ವಿಮರ್ಶಿಸುತ್ತದೆ. ನಾಟಕದ ವಿವಿಧ ಪ್ರಸಂಗಗಳ ವಿಶ್ಲೇಷಣೆಯ ಮೂಲಕ, ಜನಪದ ಪ್ರಜ್ಞೆಯು ಹೆಣ್ಣಿನ ಲೈಂಗಿಕತೆ ಮತ್ತು ನೈತಿಕತೆಯನ್ನು ನಿಯಂತ್ರಿಸುವ ಸಾಧನವಾಗಿ ಕಾರ್ಯ ನಿರ್ವಹಿಸುತ್ತಿರುವುದನ್ನು ಲೇಖನ ತೋರಿಸುತ್ತದೆ. ಸೀತೆ ಮತ್ತು ಸೂರ್ಪನಕಿ ಎಂಬ ಎರಡು ವಿರೋಧಾತ್ಮಕ ಸ್ತ್ರೀ ಮಾದರಿಗಳನ್ನು ನಿರ್ಮಿಸುವ ಮೂಲಕ, ಹೆಣ್ಣನ್ನು ಸದಾ ಅಪರಾಧಿಯ ಸ್ಥಾನದಲ್ಲಿಯೇ ಕಾಣುವ ಪಿತೃಸತ್ತಾತ್ಮಕ ಜನಪದ ಮನೋಭಾವವನ್ನು ಈ ಲೇಖನ ಗುರುತಿಸುತ್ತದೆ. ಅಂತಿಮವಾಗಿ, ಚಿತ್ರಪಟ ರಾಮಾಯಣ ಪಠ್ಯವು ರಾಮನನ್ನು ರಕ್ಷಿಸುವ ಹಾಗೂ ಹೆಣ್ಣಿನ ಮೇಲೆಯೇ ದೋಷಾರೋಪಣೆಯನ್ನು ಕೇಂದ್ರೀಕರಿಸುವ ಸಾಂಸ್ಕೃತಿಕ ರಾಜಕಾರಣವನ್ನು ಪ್ರತಿನಿಧಿಸುತ್ತದೆ ಎಂಬ ನಿರ್ಣಯಕ್ಕೆ ಲೇಖನ ಬರುತ್ತದೆ.

ಇದೊಂದು ದೊಡ್ಡಾಟದ ಪಠ್ಯ. ಇದೊಂದು ಶೈವ ಸಂಪ್ರದಾಯಕ್ಕೆ ಸೇರಿದ ರಾಮಾಯಣ ಕಥನ. ಆದರೆ ಎಲ್ಲೂ ಶೈವಚಿಂತನೆ, ವೈಷ್ಣವ ಚಿಂತನೆ ಎಂಬ ಒಡಕು ಕಾಣುವುದಿಲ್ಲ. ಹೆಣ್ಣು ಮತ್ತು ಗಂಡು ಚಿಂತನೆ ಎಂಬ ಒಡೆದ ದೃಷ್ಟಿ ಇಲ್ಲಿ ಪ್ರಧಾನವಾಗಿ ಕಾಣುತ್ತದೆ. ಸೀತೆಯು ಚಿತ್ರಿಸಿದ ರಾವಣನ ಚಿತ್ರಪಟವನ್ನು ಕೇಂದ್ರವಾಗಿಟ್ಟುಕೊಂಡು ಆಕೆಯನ್ನು ತ್ಯಜಿಸುವ ಪ್ರಸಂಗವೊಂದು 'ಚಿತ್ರಪಟ ರಾಮಾಯಣ' ದೊಡ್ಡಾಟದಲ್ಲಿ ಬರುತ್ತದೆ. ಈ ನಾಟಕದ ಸೂತ್ರಧಾರಿ ಸೂರ್ಪನಕಿ. ಅವಳು ಈಗಾಗಲೇ ಮದುವೆ ಆಗಿರುವ ರಾಮನನ್ನು ತನ್ನವನನ್ನಾಗಿ ಮಾಡಿಕೊಳ್ಳಲು ತನಗೆ ಸೀತೆ ಅಡ್ಡಿ ಎಂದು ಭಾವಿಸಿ ಸೀತೆಯ ಕೌಟುಂಬಿಕ ಬದುಕನ್ನು ಛಿದ್ರಗೊಳಿಸಲು ಇನ್ನಿಲ್ಲದಂತೆ ಪೀಡೆಯ ರೀತಿ ಕಾಡುವ ಚಿತ್ರಣಗಳು ಈ ನಾಟಕದ ಕೇಂದ್ರವಾಗಿವೆ. ಆ ಮೂಲಕ ಈ ನಾಟಕದಲ್ಲಿ ಏಕಪತ್ನಿತ್ವ ಮತ್ತು ಏಕಪತಿತ್ವ ತತ್ವ, ತಾಯ್ತನದ ಹೊಣೆ ಜೊತೆಗೆ ಜನಪದರಲ್ಲಿನ ಬಲವಾದ ಹೆಣ್ಣಿನ ಲೈಂಗಿಕ ನಿಷ್ಠೆಯ ನಂಬಿಕೆಗಳು ಪ್ರತಿಪಾದನೆಗೊಂಡಿವೆ.

'ಪಟ್ಟಕ್ಕೆ ಮಗನನ್ನು ಹಡೆಯದೆ ಹುಟ್ಟುಬಂಜೆಯಾದ ಸೀತೆಯೊಡನೆ ಎಷ್ಟು ದಿವಸ ಕಷ್ಟಪಡುವಿಯೋ ದಿಟ್ಟಾ.' (ಚಿ.ರಾ. ಪು:5) ಹೆಣ್ಣೊಬ್ಬಳ ಮೂಲಕ ಬಂಜೆಯಾದ

ISSN : 3048-7137

ಹೆಂಡತಿಯನ್ನು ಗಂಡನಾದವನು ತೊರೆಯಬೇಕು. ಇಲ್ಲವೇ ಮತ್ತೊಂದು ಮದುವೆಗೆ ಸಜ್ಜಾಗಬೇಕು ಎನ್ನುವ ಗಂಡಾಳಿಕೆಯ ಸಮಾಜದ ಧೋರಣೆ ಇಲ್ಲಿ ವ್ಯಕ್ತವಾಗಿದೆ. ಸೂರ್ಪನಕಿ, ವಂಶೋದ್ಧಾರಕನನ್ನು ನೆಪಮಾಡಿಕೊಂಡು ರಾಮ ಸೀತೆಯನ್ನು ತೊರೆಯುವ ಒಂದು ಮನೋಭೂಮಿಕೆಯನ್ನು ಸಿದ್ಧಪಡಿಸಲು ಯತ್ನಿಸುತ್ತಾಳೆ. ಹೀಗೆ ಹೆಣ್ಣೊಬ್ಬಳು ತಾನು ಆಸೆಪಟ್ಟ 'ಪರಪುರುಷ'ನನ್ನು ಪಡೆಯಲು ಗಂಡ–ಹೆಂಡತಿಯನ್ನು ಅಗಲಿಸುವ ಹಾಗೆ ಇಲ್ಲಿನ ಸನ್ನಿವೇಶ ಚಿತ್ರಣಗೊಂಡಿದೆ.

'ನನ್ನ ಪಾತಿವ್ರತ್ಯದಿಂದ ಈ ಚಿತ್ರಪಟಕ್ಕೆ ಜೀವಕಳೆಯನ್ನು ತುಂಬುತ್ತೇನೆ. ತೆಗೆದುಕೊ ಅಮ್ಮ. ಇನ್ನೇತಕೆ ತಡ ಮಾಡದೆ ಭಿಕ್ಷಾಟನೆಗೆ ತೆರಳಮ್ಮಾ ತಾಯಿ.' (ಚಿ.ರಾ. ಪು:11) ರಾವಣನ ಚಿತ್ರ ಬರೆದ ಮಾತ್ರಕ್ಕೆ ಅದಕ್ಕೆ ಬೆಲೆಯಿಲ್ಲ. ಅದಕ್ಕೆ ಪ್ರಾಣ ಬಂದರೆ ಮಾತ್ರ ಬೆಲೆ. ಚಿತ್ರಕ್ಕೆ ಪ್ರಾಣ ನೀಡಲು ಸಾಧ್ಯ ಆಗುವುದು ಸೀತೆಯ ಪಾತಿವ್ರತ್ಯಕ್ಕೆ ಮಾತ್ರ ಎಂಬ ನಂಬಿಕೆಯನ್ನು ಈ ನಾಟಕ ಬಿಂಬಿಸುತ್ತದೆ. ನಾಟಕವು ಸೀತಾ ಪರಿತ್ಯಾಗಕ್ಕೆ ರಾಮ ಕಾರಣನಲ್ಲ, ಸೂರ್ಪನಕಿ ಕಾರಣ ಎಂದು ಹೇಳುತ್ತ; ಇಡೀ ಉತ್ತರ ರಾಮಾಯಣ ಕಥನದಲ್ಲಿ ರಾಮನನ್ನು (ಜೊತೆಗೆ ಸೀತೆಯನ್ನೂ) ನಿರಪರಾಧಿ ಎಂದು ಘೋಷಿಸುತ್ತದೆ.

ಲವಕುಶ ಕಾಳಗದ ಪ್ರಸಂಗದಲ್ಲು ಸೀತೆಯ ಪಾತಿವ್ರತ್ಯದ ವಿಚಾರ ಮುನ್ನೆಲೆಗೆ ಬರುತ್ತದೆ. 'ನಮ್ಮ ತಾಯಿಯ ಪಾತಿವ್ರತ್ಯವು ಸ್ಥಿರವಾಗಿದ್ದರೆ ಬ್ರಹ್ಮಾಸ್ತ್ರ ನಾಶವಾಗಲೆಂದು ಶಪಥ ಮಾಡಿ ಬಾಣ ಪ್ರಯೋಗ ಮಾಡೋ ಅಣ್ಣಯ್ಯನೆ' (ಚಿ.ರಾ. ಪು:60) ತಮ್ಮ ಬಾಣಗಳು ರಾಮ ಲಕ್ಷ್ಮಣರನ್ನು ಏನೂ ಮಾಡದಿದ್ದಾಗ ಕುಶ ಲವನಿಗೆ ಹೇಳುವ ಮಾತುಗಳಿವು. ಪಾತಿವ್ರತ್ಯಕ್ಕೆ ರಾಮಬಾಣವನ್ನೂ ಹಿಮ್ಮೆಟ್ಟಿಸುವ ಶಕ್ತಿ ಇದೆ ಎಂದು ಜನಪದರು ನಂಬುವಂತೆ ಈ ವಿಚಾರ ಇಲ್ಲಿ ನಿರೂಪಿತವಾಗಿದೆ.

ಹೀಗೆ ಹೆಣ್ಣಿನ ಪಾತಿವ್ರತ್ಯ ಶಕ್ತಿಯ ಕುರಿತು ಜನಪದರಿಗೆ ಆಗಾಧವಾದ ನಂಬಿಕೆ ಇರುವುದು ಇಲ್ಲಿ ಕಾಣುತ್ತದೆ. ಇಲ್ಲಿ ಬರುವ ಸೀತೆ ಚಿತ್ರಪಟಕ್ಕೆ ಜೀವ ತುಂಬುವ ಪ್ರಸಂಗ ಹಾಗೂ ಲವಕುಶ ಕಾಳಗದಲ್ಲಿ ಕುಶನ ಬಾಣಕ್ಕೆ ಶಕ್ತಿ ಬರುವ ಈ ಎರಡು ಪ್ರಸಂಗಗಳು ಪಾತಿವ್ರತ್ಯ ಪ್ರತಿಪಾದನೆಯನ್ನೆ ಒಳಗೊಂಡಿವೆ. ಈ ಎರಡೂ ಪ್ರಸಂಗದಲ್ಲಿ ಹೆಣ್ಣಿನ ಪಾತಿವ್ರತ್ಯಕ್ಕೆ ಈ ನಾಟಕ ಅತಿರಂಜಿತವಾದ ಶಕ್ತಿಯನ್ನು ಆರೋಪಿಸಿ ಹೆಣ್ಣಿನ ಶೀಲ ಮತ್ತು ಪತಿನಿಷ್ಠೆಯನ್ನು ಒಂದು ಶ್ರೇಷ್ಠವಾದ ಮೌಲ್ಯ ಎಂಬಂತೆ ಬಿಂಬಿಸುತ್ತದೆ. ಗಂಡಾಳಿಕೆಯ ಲೈಂಗಿಕ ಸಂಕಥನವನ್ನು ನಿರಂತರ ಜಾರಿ ಮಾಡಲೆಂದೆ ಜನಪದರು ಈ ಚಿತ್ರಪಟ ರಾಮಾಯಣ ನಾಟಕವನ್ನು ತಯಾರಿಸಿದಂತೆ ಕಾಣುತ್ತದೆ.

ಸೂರ್ಪನಕಿ ತನ್ನಲ್ಲಿಯೆ ಬಿಟ್ಟುಹೋದ ರಾವಣನ ಜೀವಂತ ಚಿತ್ರಪಟವನ್ನು ಸೀತೆ ತನ್ನ ಹಾಸಿಗೆ ಕೆಳಗೆ ಬಚ್ಚಿಡುತ್ತಾಳೆ. ಗಂಡ–ಹೆಂಡತಿ ಮಂಚವನ್ನು ಏರುವಾಗ ಗಟ್ಟಿಮುಟ್ಟಾದ ಮಂಚ ಮುರಿಯುತ್ತದೆ. ಸೀತೆಯ ಹಾಸಿಗೆಯ ಕೆಳಗೆ ರಾವಣನ ಜೀವಂತ ಚಿತ್ರಪಟವನ್ನು ಕಂಡ ರಾಮ ಆಕೆಯನ್ನು ತಪ್ಪಿತಸ್ಥಳೆಂದೆ ಭಾವಿಸುತ್ತಾನೆ. ಇವಳು ಪರ ಪುರುಷನ ನೆನಪಿನಲ್ಲಿ ಇದ್ದಾಳೆ. ಅವನ ಮೋಹದಲ್ಲಿ ಬಿದ್ದು ಅವನ ಚಿತ್ರಪಟವನ್ನು ರಚಿಸಿ ಮಲಗುವ ಹಾಸಿಗೆಯ ಕೆಳಗೆ ಬಚ್ಚಿಟ್ಟುಕೊಂಡಿದ್ದಾಳೆ. ಇದು ಶಿಕ್ಷಾರ್ಹ ಅಪರಾಧ ಎಂದು ರಾಮ ನಿರ್ಧರಿಸುತ್ತಾನೆ.

'ಆ ದುಷ್ಟನಾದ ರಾವಣನನ್ನು ಕೊಂದದ್ದಕ್ಕಾಗಿ ಆ ಸಿಟ್ಟನ್ನು ಇಟ್ಟುಕೊಂಡು ಆ ಭ್ರಷ್ಟನ ಚಿತ್ರಪಟವನ್ನು ಬರೆದಿಟ್ಟುಕೊಂಡಿರುವೆಯಾ? ಬಹುಮಂದಿ ಕಪಿಗಳನ್ನು ದಣಿಸಿ ರಾವಣನನ್ನು ವಧಿಸಿ ನಿನ್ನನ್ನು ತಂದಿದ್ದು ಹೇಗಾಯಿತೆಂದರೆ ಬಾಯಿ ತೆರೆದು ಬ್ರಹ್ಮಲೋಕಕ್ಕೆ ಹೋಗಿ ಹುಚ್ಚುನಾಯಿಯನ್ನು ತಂದಂತಾಯಿತು.' (ಚಿ.ರಾ. ಪು:13) ಹೀಗೆ ರಾಮ ಸೀತೆಯನ್ನು ಹಲವು ಬಗೆಯಲ್ಲಿ ನಿಂದಿಸಿ ಅನುಮಾನಿಸುತ್ತಾನೆ, ಅವಮಾನಿಸುತ್ತಾನೆ. ಸೀತೆಯು ರಾವಣನ ರೂಪವನ್ನು ನೋಡಲೆಂದೆ ಚಿತ್ರವನ್ನು ಬರೆದು ಇಟ್ಟುಕೊಂಡಿದ್ದಾಳೆಂದೆ ರಾಮ ಭಾವಿಸುವ ಹಾಗೆ ಇಲ್ಲಿನ ಚಿತ್ರಣ ಇದೆ. ರಾವಣನನ್ನು ನಾನು ಕೊಂದಿದ್ದಕ್ಕೆ ನೀನು ನನಗೆ ವಿಷಕೊಟ್ಟು ಕೊಲ್ಲುವುದಕ್ಕು ಹೇಸುವುದಿಲ್ಲ; ಎಲ್ಲಿಯಾದರೂ ಹೊರಟು ಹೋಗು, ಮುಖ ತೋರಿಸಬೇಡ ಎನ್ನುವ ರಾಮನ ಈ ಮಾತುಗಳಲ್ಲಿ ಅತ್ಯಂತ ನಿಷ್ಠೂರತೆ ಕಂಡುಬರುತ್ತದೆ.

'ಸೀತೆದೇವಿ ಮಹಾ ಪತಿವ್ರತೆ' (ಚಿ.ರಾ. ಪು:20) ಎಂಬ ಕೌಸಲ್ಯೆಯ ಮಾತುಗಳೂ ಇಲ್ಲಿ ವ್ಯರ್ಥವಾಗುತ್ತವೆ. ದಾಂಪತ್ಯದಲ್ಲಿ ಹಿರಿಯರ ಮಾತು ನಗಣ್ಯವಾಗಿ ಪತಿಯ ನಿರ್ಧಾರವಷ್ಟೆ ಅಂತಿಮ ಎಂಬ ನಿಲುವು ಇಲ್ಲಿ ಪ್ರಕಟವಾಗಿದೆ. ಕೌಸಲ್ಯೆ, ವಿಭೀಷಣ, ಲಕ್ಷ್ಮಣ, ಹನುಮಂತ ಇವರ ಯಾರ ಮಾತನ್ನು ರಾಮ ಕೇಳುವುದಿಲ್ಲ. ಸೀತೆ ಅಪರಾಧಿ ಎಂದು ಭಾವಿಸಿ ಆಕೆಯ ತಲೆಯನ್ನು ಕಡಿದು ಬರಲು ಲಕ್ಷ್ಮಣನಿಗೆ ಆಜ್ಞಾಪಿಸುವ ಶ್ರೀರಾಮ ಹಾಗೆ ಏಕಪಕ್ಷೀಯವಾಗಿ ನಿರ್ಧಾರವನ್ನು ತೆಗೆದುಕೊಳ್ಳಬಹುದೇ?

ಅಪಹರಣಕ್ಕೆ ಒಳಗಾದ ಹೆಣ್ಣಿನ ಜೊತೆಗೆ ಮತ್ತೆ ಸಂಸಾರ ಮಾಡುವುದೇ ದೊಡ್ಡದು. ಅಂಥದ್ದರಲ್ಲಿ ರಾವಣನಂಥವನ ಧ್ಯಾನದಲ್ಲಿ ಯಾರಾದರು ಉಳಿದರೆ ಅವರು ಬದುಕಿರುವುದಕ್ಕು ಯೋಗ್ಯವಲ್ಲ ಎನ್ನುವ ಹಾಗೆ ಇಲ್ಲಿ ಕಥನವನ್ನು ಕಟ್ಟಲಾಗಿದೆ. ಆದರೆ ಇದೇ ನಾಟಕದ ಕೊನೆಯಲ್ಲಿ 'ಇವರನ್ನು ಪರಿಗ್ರಹಿಸು' ಎಂದು ಹೇಳಿದ ವಾಲ್ಮೀಕಿಯ ಒಂದೇ ಒಂದು ಮಾತಿಗೆ ಮರುಮಾತಿಲ್ಲದೆ ಪರಾಕ್ರಮಿಗಳಾದ ಮಕ್ಕಳನ್ನು ತನ್ನ ಮಕ್ಕಳೆಂದೆ ಶ್ರೀರಾಮ ಒಪ್ಪುತ್ತಾನೆ. ಅವರನ್ನು ಅಯೋಧ್ಯೆಗೆ

ISSN : 3048-7137

ಕರೆದುಕೊಂಡು ಹೋಗುತ್ತಾನೆ. ಆಗ ರಾಮನಿಗೆ ಸೀತೆಯಲ್ಲಿ ದೋಷ ಕಾಣುವುದಿಲ್ಲ. ನಮ್ಮ ಜನಪದರಿಗೆ ಗಂಡು ಮಕ್ಕಳನ್ನು ಹೆತ್ತುಕೊಟ್ಟ ತಾಯಿಯಲ್ಲಿ ದೋಷ ಕಾಣುವುದಿಲ್ಲ!

'ತರುಣಿ ಎಂಬ ಕರುಣದಿಂದ ವ್ಯಭಿಚಾರವನ್ನು ಮುಚ್ಚಿಕೊಂಡರೆ ಕುಲಕಂಟಕ ರಾಮನೆಂದು ಅಪಕೀರ್ತಿ ಹೊತ್ತೇನು ನನ್ನ ಆಜ್ಞೆಯನ್ನು ಮೀರುವೆಯಾ?' (ಚಿ.ರಾ. ಪು:16) ಸೀತೆ ನಿರಪರಾಧಿ ಎಂಬುದು ರಾಮನ ಪರಿವಾರಕ್ಕೆ ಗೊತ್ತಿದೆ. ಆದರೂ ಇದು ಗಂಡ ಹೆಂಡತಿಯ ಲೈಂಗಿಕನಿಷ್ಠೆಯ ವಿಚಾರ; ಅಲ್ಲಿ ರಾಮನ ನಿಲುವೆ ಅಂತಿಮ. ಸೀತೆ ಇಲ್ಲಿಯೆ ಉಳಿದರೆ ತಾನೇ ಸನ್ಯಾಸಿ ಆಗುತ್ತೇನೆ ಎನ್ನುವ ಮಟ್ಟಕ್ಕು ರಾಮ ಹೋಗುತ್ತಾನೆ. ರಾಜಾಜ್ಞೆಯಾದ್ದರಿಂದ ಲಕ್ಷ್ಮಣ ಸೀತೆಯ ತಲೆಕಡಿದು ಬರಲು ಒಪ್ಪಿಕೊಳ್ಳುತ್ತಾನೆ. ಲಕ್ಷ್ಮಣ ಇಲ್ಲಿ ಆಜ್ಞಾಧಾರಕನಾದರು ಆತ ಅಂತಃಕರುಣಿ ಹಾಗು ವಿವೇಕಿಯಾಗಿ ಕಾಣುತ್ತಾನೆ.

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶ ಎಂದರೆ ಸೀತೆ ಗರ್ಭಿಣಿ ಎನ್ನುವ ವಿಷಯ ಅವಳ ಸಖಿ ಚಂದ್ರಮತಿಗೆ ಬಿಟ್ಟು ಬೇರೆ ಯಾರಿಗೂ ತಿಳಿದಿರುವುದಿಲ್ಲ. ಅಲ್ಲದೇ ತಾನು ತಾಯಿಯಾಗುತ್ತಿರುವುದನ್ನು ನಂಬಲು ಸಾಧ್ಯವಾಗದಷ್ಟು ಸೀತೆಯಲ್ಲಿ ಬಂಜೆತನದ ನೋವು ಆವರಿಸಿಕೊಂಡಿರುತ್ತದೆ. ಸೀತೆಗೆ ನೀಡಿದ ಶಿಕ್ಷೆ ಬಗ್ಗೆ ತಿಳಿದ ಸಿದ್ವೀರಿ ಮತ್ತು ಶಿವನ ದಂಪತಿಗಳು (ಪ್ರಜೆಗಳು) ಇಲ್ಲಿ ಮಾತನಾಡಿಕೊಳ್ಳುವ ಒಂದು ದೃಶ್ಯವನ್ನು ಕಟ್ಟಲಾಗಿದೆ. ಈ ದೃಶ್ಯದಲ್ಲಿ ಸೀತೆ ಬಂಜೆ, ಬಂಜೆ ಹೆಣ್ಣಿಗೆ ಗೌರವ ಇಲ್ಲ ಎಂಬ ಸಂದೇಶವನ್ನೇ ಸಾರಲಾಗಿದೆ. ಇಲ್ಲಿ ಶಿವನ ಎಂಬ ಪ್ರಜೆ ಹೆರದಿರುವವಳು ಸಂಸಾರ ಮಾಡಲು ಯೋಗ್ಯಳಲ್ಲ. ದಾಂಪತ್ಯದಲ್ಲಿ ಮಕ್ಕಳು ಅನಿವಾರ್ಯ. ಸತ್ತ ನಂತರ ಹೆತ್ತವರಿಗೆ ಸದ್ಗತಿ ದೊರೆಯುವುದು ಮಕ್ಕಳಿಂದಲೆ ಎನ್ನುವ ನಂಬಿಕೆಗಳೆ ಇವನ ಮೂಲಕ ವ್ಯಕ್ತವಾಗಿವೆ. ಇಲ್ಲಿ ಸಿದ್ವೀರಿ ಒಬ್ಬ ಬಂಜೆ ಆಗಿದ್ದು, ಆ ಕಾರಣಕ್ಕೆ ಅವಳನ್ನು ತ್ಯಜಿಸಲು ಸಿದ್ಧವಾಗಿದ್ದ ಶಿವನ ಆನಂತರದಲ್ಲಿ ತಾನು ಆರು ತಿಂಗಳ ಗರ್ಭಿಣಿ ಎಂದು ಸಿದ್ವೀರಿ ಹೇಳಿದಾಗ ತನ್ನ ನಿಲುವನ್ನು ಬದಲಾಯಿಸಿಕೊಳ್ಳುತ್ತಾನೆ.

ಸಿದ್ವೀರಿ, ಸೀತೆ ಈ ಇಬ್ಬರೂ ಇಲ್ಲಿ ಸಾಮಾನ್ಯ ಹೆಣ್ಣಿನ ಪ್ರತಿನಿಧಿಗಳೆ. ಏಕಕಾಲಕ್ಕೆ ಈ ಪಠ್ಯವು 1. ಬಂಜೆ ಆದ ಹೆಣ್ಣನ್ನು ತ್ಯಜಿಸಬೇಕು. ಜೊತೆಗೆ 2. ಪರಪುರುಷನ ಚಿತ್ರವನ್ನು ಕಲ್ಪಿಸಿಕೊಳ್ಳುವ, ಅಥವಾ ಅವನನ್ನು ಮನಸ್ಸಿನಲ್ಲಿ ಭಾವಿಸುವ ಹೆಣ್ಣಿನ ತಲೆ ತೆಗೆಯಬೇಕು ಎಂಬುದೆ ಸರಿ ಎನ್ನುವುದನ್ನು ಮತ್ತೆ ಮತ್ತೆ ಪ್ರತಿಪಾದಿಸುತ್ತದೆ.

ಅಚ್ಚರಿ ಎಂದರೆ ಅರಮನೆಯಿಂದ ಕಾಡಿಗೆ ಹೊರಡುವಾಗ ಬಾಗಿನವನ್ನು ಸ್ವೀಕರಿಸಿದ ಸೀತೆಯು ? ಈ ಬಾಗಿನವನ್ನು ತೆಗೆದುಕೊಂಡು ಹತ್ತು ಸಹಸ್ರ ಜನ್ಮದಲ್ಲಾದರೂ ಶ್ರೀರಾಮಚಂದ್ರನೆ ನನಗೆ ಪತಿಯಾಗಲೆಂದು ಆಶೀರ್ವಾದ

ಮಾಡಿರಮ್ಮಾ ತಾಯಿಗಳಿರ.' (ಚಿ.ರಾ. ಪು:24) ಎಂದು ಎಲ್ಲರಿಂದ ಬೀಳ್ಕೊಂಡು ಹೊರಡುತ್ತಾಳೆ. ಗಂಡ ಏನೇ ಶಿಕ್ಷೆ ನೀಡಿದರೂ ಹೆಂಡತಿಯ ದೃಷ್ಟಿಯಲ್ಲಿ ಅವನು ಪತಿಪರಮೇಶ್ವರನೆ! ಗಂಡನಿಂದ ಅಪಮಾನಕ್ಕೆ ಒಳಗಾದರೂ ಹೆಂಡತಿಗೆ ಅವನ ಮೇಲೆ ದ್ವೇಷ ಇರಬಾರದು! ಅವನು ಎಷ್ಟೇ ಕೆಟ್ಟದ್ದನ್ನು ಮಾಡಿದರೂ ಅವನೇ ಏಳೇಳು ಜನ್ಮಕ್ಕೆ (ಹತ್ತು ಸಾವಿರ ಜನ್ಮಕ್ಕು) ಗಂಡನಾಗಿರಬೇಕು ಎಂಬುದು ಲೋಕದ ಹೆಣ್ಣುಗಳ ನಂಬಿಕೆ ಎಂಬಂತೆಯೆ ಇಲ್ಲಿ ಸೀತೆಯನ್ನು ಚಿತ್ರಿಸಲಾಗಿದೆ.

ಸೀತೆ ಮತ್ತು ಲಕ್ಷ್ಮಣರ ಕಾಡಿನ ದಾರಿ ಪಯಣದ ಭಾಗ ಅತ್ಯಂತ ಸಂಕ್ಷಿಪ್ತವಾಗಿದೆ. ಲಕ್ಷ್ಮಣ ತನ್ನ ತಲೆ ಕಡಿಯಲು ಮುಂದಾದಾಗ ತನ್ನ ಹಣೆಬರಹವೆ ಹೀಗಿರುವಾಗ ಯಾರು ಅದನ್ನು ಬದಲಾಯಿಸಲು ಸಾಧ್ಯವಿಲ್ಲ ಎಂಬ ಅರಿವು ಸೀತೆಗಿದೆ ಎಂಬಂತೆ ಇಲ್ಲಿನ ಚಿತ್ರಣ ಇದೆ. ಈ ನಾಟಕದಲ್ಲಿ ವಿಧಿ, ಹಣೆಬರಹಗಳು ಮತ್ತೆ ಮತ್ತೆ ಪ್ರಸ್ತಾಪ ಆಗುತ್ತವೆ.

ಸೀತೆಯನ್ನು ಕೊಲ್ಲಲು ಕತ್ತಿ ಎತ್ತಿದಾಗ ಕತ್ತಿಯಲ್ಲಿ ಶಿಶುವಿನ ಬಿಂಬ ಲಕ್ಷ್ಮಣನಿಗೆ ಕಾಣಿಸಿಕೊಂಡು ಸೀತೆ ಗರ್ಭಿಣಿ ಎಂಬ ಸಂಗತಿ ತಿಳಿಯುತ್ತದೆ ಎಂಬುದು ಇಲ್ಲಿ ಸಾಂಕೇತಿಕವಾದದ್ದು. ಸ್ತ್ರೀ ಹತ್ಯೆ ಮತ್ತು ಶಿಶು ಹತ್ಯೆ ಎರಡೂ ದೋಷ ಎಂಬುದನ್ನು ನೆನಪಿಸಿಕೊಂಡ ಲಕ್ಷ್ಮಣ ಸೀತೆಯನ್ನು ಕೊಲ್ಲದೆ ಕಾಡಿನಲ್ಲಿ ಬಿಟ್ಟು ಹೋಗುತ್ತಾನೆ. ಆದರೆ ಇಂತಹ ಹೆಣ್ಣನ್ನು ಕೊಲ್ಲುವುದು ದೋಷ ಎಂದಾದ ಮೇಲೆ ಆ ದೋಷ ರಾಮನಿಗು ತಟ್ಟಬೇಕಲ್ಲವೇ?

ಲಕ್ಷ್ಮಣ ಗರ್ಭಿಣಿ ಸೀತೆಯನ್ನು ಕೊಲ್ಲದೆ ಪ್ರಾಣಿಯೊಂದರ ರಕ್ತವನ್ನು ಕತ್ತಿಗೆ ಸವರಿಕೊಂಡು ತಂದು ರಾಮನಿಗೆ ತೋರಿ ಸೀತೆಯನ್ನು ಕೊಂದು ಬಂದೆ ಎಂದಾಗ ರಾಮ ಕತ್ತಿಯಲ್ಲಿ ಮೆತ್ತಿಕೊಂಡಿದ್ದ ರಕ್ತ ಸೀತೆಯದೆ ಎಂದು ತಿಳಿದು ಸಿಟ್ಟನಿಂದ ತಲೆಯನ್ನು ಕಡಿದು ಬಾ ಎಂದರೆ ಅದನ್ನೇ ನಿಶ್ಚಯವೆಂದು ತಿಳಿದುಕೊಂಡು ಕೋಮಲಾಂಗಿಯನ್ನು ಕರುಣೆ ಇಲ್ಲದೇ ಕೊಂದು ಬಂದೆಯಾ? ಆ ಕೋಮಲಾಂಗಿಯನ್ನು ಕೊಲ್ಲುವುದಕ್ಕೆ ನಿನ್ನ ಕೈಗಳಾದರೂ ಹೇಗೆ ಎದ್ದವೋ ಲಕ್ಷ್ಮಣ? ನಿನ್ನ ಮನಸ್ಸಿಗೆ ಏನೂ ಆಗಲಿಲ್ಲವೆ?' (ಚಿ.ರಾ. ಪು:27) ಸೀತೆಯನ್ನು ತ್ಯಜಿಸುವಾಗ ರಾಮನಿಗೆ ಏನು ಅನಿಸಲಿಲ್ಲ. ಆದರೆ ಅವಳ ಸಾವಿನ ಸುದ್ದಿ ಕೇಳಿ ಬಹಳ ನಾಟಕೀಯವಾಗಿ ದುಃಖಿಸುತ್ತಾನೆ. ನಾಟಕಪಠ್ಯದ ಸೃಷ್ಟಿಕರ್ತರು ಮತ್ತು ಪ್ರದರ್ಶಕರು ತಿಪ್ಪೆ ಸಾರಿಸಲು ಈ ಪ್ರತಿಕ್ರಿಯೆಯನ್ನು ನಾಟಕೀಯವಾಗಿ ರೂಪಿಸಿದಂತೆ ಕಾಣುತ್ತದೆ.

ರಾಮನನ್ನು ಮರ್ಯಾದಾ ಪುರುಷೋತ್ತಮ ಆಗಿ ಕಂಡಿರುವ ಗಂಡಸರು ಅವನದೇನೂ ತಪ್ಪಿಲ್ಲ ಎಂದೇ ನಿರೂಪಿಸಲು ಹೆಣಗಿದ್ದಾರೆ. ಹಾಗಾಗಿ ಈ ನಾಟಕದಲ್ಲಿ

ISSN : 3048-7137

ಅವನು ಮಾನವೀಯ ಕರುಣಾಮೂರ್ತಿ; ಒಮ್ಮೆ ಸಿಟ್ಟಿನ ಕೈಗೊಂಬೆ, ಇನ್ನೊಮ್ಮೆ ಅವನು ವಿಧಿಯ ಕೈಗೊಂಬೆ, ಮತ್ತೊಮ್ಮೆ ರಾಜಕಾರ್ಯದ ಅನಿವಾರ್ಯತೆಗೆ ಸಿಲುಕಿದ ದೊರೆ, ಮಗದೊಮ್ಮೆ ಶೂರ್ಪನಕಿಯಂಥ ಯಾರದೋ ಕಾಣದವರ ಸಂಚಿನ ಕೈಗೊಂಬೆ ಹೀಗೆ ಏಕಪಾತ್ರಾಭಿನಯ ಮಾಡುವ ಪಾತ್ರವಾಗಿ ಚಿತ್ರಿತವಾಗಿದ್ದಾನೆ.

ಈ ನಾಟಕದಲ್ಲಿನ ಕುಶನ ಜನನದ ಪ್ರಸಂಗ ಕುತೂಹಲಕರವಾಗಿದೆ. ಕುಶ ನೇರವಾಗಿ ಸೀತೆಯ ಮಗು ಅಲ್ಲ. ಅವನು ವಾಲ್ಮೀಕಿಯ ದರ್ಬೆಯಿಂದ ಹುಟ್ಟಿದ ಮಗ. ಇದು ಕೂಡ ಸಾಂಕೇತಿಕವಾದದ್ದು. ಇದೊಂದು ಜನಪದ ಆಶಯ ಎಂಬಂತೆ ಹಲವು ಜನಪದ ಕಥನಗಳಲ್ಲಿ ಬಳಕೆ ಆಗಿದೆ. ಕೆಲವರು ಅಯೋನಿಜರಾದರೂ ಅವರು ಹೆಣ್ಣಿನಲ್ಲಿ ಜನಿಸಿದವರೆ ಆಗಿರುತ್ತಾರೆ. ಆದರೆ ಕುಶ ಹೆಣ್ಣಿಗೆ ಜನಿಸಿದ ಮಗು ಅಲ್ಲ. ಅವನು ಪುರುಷ ಪುತ್ರ. ಆದರೂ ಸೀತೆ ಅವನನ್ನು ತನ್ನ ಮಗ ಲವನಿಗಿಂತ ಹೆಚ್ಚಾಗಿಯೇ ಪ್ರೀತಿಯಿಂದ ಸಾಕುತ್ತಾಳೆ.

ಗೊಂಡರ ರಾಮಾಯಣ ಮತ್ತು ಜನಪದ ರಾಮಾಯಣ ಎರಡೂ ಕಡೆ ಕುಶನ ಜನನ ಇದೇ ರೀತಿಯಾಗಿ ಅಯೋನಿಜ ಎಂಬತೆ ನಿರೂಪಣೆಯಾಗಿದೆ. ಹಾಗೆಯೇ ಹೆಳವನಕಟ್ಟೆ ಗಿರಿಯಮ್ಮನ 'ಲವಕುಶರ ಹಾಡು' ಮತ್ತು ಪದ್ಮಸಾಲೆ ತಿಮ್ಮಣ್ಣ ಕವಿಯ 'ಕುಶಲವರ ಕಾಳಗ' ಈ ಶಿಷ್ಟ ಪಠ್ಯಗಳಲ್ಲಿ ಕುಶ ಜನನ ಈ ರೀತಿಯಲ್ಲಿಯೇ ನಿರೂಪಣೆಗೊಂಡಿದೆ. ಸೀತೆ ಇಬ್ಬರನ್ನೂ ತನ್ನ ಮಕ್ಕಳೆಂದೆ ಒಪ್ಪಿಕೊಳ್ಳುತ್ತಾಳೆ. ಹಾಗೆಯೇ ರಾಮ ಕೂಡ ಪ್ರಶ್ನಿಸದೇ ಒಪ್ಪಿಕೊಳ್ಳುತ್ತಾನೆ. ಈ ನಾಟಕವು ಸೀತೆಯನ್ನು ಅವಳಿ ಮಕ್ಕಳನ್ನು ಹೆತ್ತ ತಾಯಿ ಎಂದು ಹೇಳದೆ ವಾಲ್ಮೀಕಿ ಆಶ್ರಮದಲ್ಲಿ ವಾಲ್ಮೀಕಿ ಸೃಷ್ಟಿಯಿಂದ ಒಂದು ಮಗುವನ್ನು ಪಡೆದ ತಾಯಿ ಎಂದು ತಿಳಿಸಲಾಗಿದೆ.

ಹಾಗೆ ನೋಡಿದರೆ ಅಣ್ಣ ಲವನಿಗಿಂತ ಸೀತೆಯಲ್ಲಿ ಜನಿಸದ, ವಾಲ್ಮೀಕಿ ಸೃಷ್ಟಿಸಿದ, ಸೀತೆ ಸಾಕಿದ 'ಕುಶ' ಹೆಚ್ಚು ಬುದ್ದಿಶಾಲಿಯಾಗಿಯೂ, ಪರಾಕ್ರಮಿಯಾಗಿಯೂ ಕಂಡು ಬರುತ್ತಾನೆ. ಸೀತೆಗೆ ಹುಟ್ಟಿದ ಲವನ ಹಾಗೆ ಮುನಿಪುತ್ರನು ಯಾವುದಾದರೂ ಒಂದು ಹೆಣ್ಣಿಗೆ ಹುಟ್ಟಿರಬಹುದಲ್ಲವೇ? ಆದರೆ ನಾಟಕದಲ್ಲಿ ಸೀತೆಯೆ ಅವನ ತಾಯಿ ಎಂದು ಪ್ರಶ್ನಾತೀತವಾಗಿ ಪ್ರತಿಪಾದಿಸಲಾಗಿದೆ. ಸೀತಾ ಪರಿತ್ಯಾಗದ ವೇಳೆ ದಿವ್ಯದೃಷ್ಟಿಯಿಂದ ಎಲ್ಲಾ ತಿಳಿದುಕೊಂಡೆ ಎನ್ನುವ ವಾಲ್ಮೀಕಿಗೆ ಮಗು ಸೀತೆಯ ಜೊತೆಗೆ ಇರುವ ವಿಚಾರ ತಿಳಿಯಲಿಲ್ಲವೆ? ವಾಲ್ಮೀಕಿಯಂಥ ಋಷಿಗಳಿಗೆ ಮಗುವನ್ನು ಸೃಷ್ಟಿಸುವ ಶಕ್ತಿ ಇತ್ತು ಎಂಬ ಈ ಸಂಗತಿ ಕೂಡ ಒಂದು ಜನಪದ ಆಶಯವೇ ಹೌದು.

ಈ ನಾಟಕದ ಕೊನೆಯಲ್ಲಿ ರಾಮ ಸೀತೆಯರ ನಡುವೆ ಯಾವುದೇ ಸಂಭಾಷಣೆಗಳು ಕಂಡು ಬರುವುದಿಲ್ಲ. ಆಕೆ ರಾಮನನ್ನು ಪ್ರಶ್ನಿಸುವುದಿಲ್ಲ. ಇಲ್ಲೆಲ್ಲ

ನಾಟಕವು ಅತ್ಯಂತ ತ್ವರಿತಗತಿಯಲ್ಲಿ ಸಾಗಿದೆ. ನಾಟಕಕಾರರು ಇಲ್ಲಿನ ಸನ್ನಿವೇಷಗಳನ್ನು ಸಾಕಷ್ಟು ಸಂಕ್ಷಿಪ್ತಗೊಳಿಸಿದ್ದಾರೆ. ಇಲ್ಲಿನ ಪಾತ್ರಗಳಲ್ಲಿ ಯಾವುದೇ ತಕರಾರಿಲ್ಲದೆ ನಾಟಕವು ಸುಖಾಂತ್ಯ ಕಾಣುವುದು ನಾಟಕಕಾರರ ಜಾಣ್ಮೆಯೆ ಸರಿ.

ಹೆಣ್ಣೊಬ್ಬಳು 'ಒಲಿದರೆ ನಾರಿ ಮುನಿದರೆ ಮಾರಿ' ಎಂಬ ಜನಪದರ ನಂಬಿಕೆಯಂತೆ ಈ ದೊಡ್ಡಾಟದಲ್ಲಿ ಸೂರ್ಪನಕಿಯನ್ನು ಚಿತ್ರಿಸಲಾಗಿದೆ. ಮೊದಲು ಸೀತೆಯನ್ನು ಶ್ರೀರಾಮನು ಅಪರಾಧಿ ಎಂದು ನಿರ್ಣಯಿಸಲು ಕಾರಣ ಆದವಳೆ ಸೂರ್ಪನಕಿ. ನಂತರದಲ್ಲಿ ಲವಕುಶರ ಮೇಲೆ ವಿಭೀಷಣನನ್ನು ಎತ್ತಿ ಕಟ್ಟಿದವಳೂ ಇವಳೇ, ರಾಮ– ಲವಕುಶರ ಕಾಳಗಕ್ಕೂ ಇವಳೆ ಕಾರಣ. ಹೇಗಾದರೂ ಮಾಡಿ ಸೀತೆಯನ್ನು ಇಲ್ಲವಾಗಿಸಿ ರಾಮನನ್ನು ಮದುವೆ ಆಗುವುದು ಇವಳ ಉದ್ದೇಶ. ಮೋಹಿನಿ, ಯೋಗಿನಿ, ಅಪ್ಸರೆ– ಸಂಗೀತ ಕಲಾವಿದೆ, ವಿಭೀಷಣನ ಅಕ್ಕ, ಮಾರಿದೇವಿ, ಕೊರವಂಜಿ, ರಕ್ಕಸಿ ಹೀಗೆ ಹಲವು ರೂಪಗಳನ್ನು ತಾಳಬಲ್ಲ ಶಕ್ತಿ ಇವಳಿಗೆ ಇದೆ. ಹೀಗೆ ಒಳಿತು ಮತ್ತು ಕೆಡುಕು ಎರಡೂ ವ್ಯಕ್ತಿತ್ವವುಳ್ಳ ಪಾತ್ರವಾಗಿ ಹೆಣ್ಣು ತನ್ನ ರೂಪ ಬದಲಿಸಬಲ್ಲಳು; ಅವಳು ಮನಸ್ಸು ಮಾಡಿದರೆ ಒಳ್ಳೆಯದು ಘಟಿಸುವಂತೆಯೂ, ಮುನಿದರೆ ಕೇಡು ಘಟಿಸುವಂತೆಯೂ ಮಾಡಬಲ್ಲಳು ಎಂಬಂತೆ ಇವಳ ಪಾತ್ರವನ್ನು ನಾಟಕದುದ್ದಕ್ಕು ಚಿತ್ರಿಸಲಾಗಿದೆ.

ಹಲವು ರಾಮಾಯಣ ಪಠ್ಯಗಳಲ್ಲಿ ಸೀತೆಯನ್ನು ಶ್ರೀರಾಮನು ಮತ್ತೆ ಕಾಡಿಗೆ ಕಳಿಸಲು ಅಗಸನೆ ಕಾರಣವಾದರೆ ಚಿತ್ರಪಟ ರಾಮಾಯಣದಲ್ಲಿ ಸೂರ್ಪನಕಿ ಕಾರಣವಾಗಿದ್ದಾಳೆ. ಜನಪದ ಪ್ರಜ್ಞೆ ಇಲ್ಲಿ ಅಗಸರನ್ನು ಅಪರಾಧಿ ಸ್ಥಾನದಿಂದ ಬಿಡುಗಡೆಗೊಳಿಸಿ ಹೆಣ್ಣನ್ನು ('ಸೂರ್ಪನಕಿ'ಯನ್ನು) ಅಪರಾಧಿ ಸ್ಥಾನದಲ್ಲಿ ಸ್ಥಾಪಿಸುತ್ತದೆ. ಗಿರಿಯಮ್ಮ, ತಿಮ್ಮಣ್ಣ ಕವಿಯ ಪಠ್ಯಗಳಲ್ಲಿ ಸೂರ್ಪನಕಿಗೆ ಬದಲಾಗಿ ತಾಟಗಿತ್ತಿ ಅಥವಾ ಮಂತುಣಿ, ತಾಟಕಿ ಎನ್ನುವ ರೂಪಾಂತರಿ ಹೆಣ್ಣುಗಳ ಚಿತ್ರಣಗಳಿವೆ. ಆ ಪಾತ್ರಗಳು ಸೂರ್ಪನಕಿಯ ಹಾಗೆಯೆ ಸೀತೆಯ ದುರಂತ ಬದುಕಿಗೆ ಕಾರಣವಾಗಿವೆ.

ಒಂದು ಹೆಣ್ಣಿಗೆ ಮಾತೃತ್ವ ಎಷ್ಟು ಮುಖ್ಯವೋ ಪಾತಿವ್ರತ್ಯವು ಅಷ್ಟೇ ಮುಖ್ಯ ಎಂಬ ಮೌಲ್ಯವನ್ನು ಹೇಳುತ್ತಲೆ ರಾಮ–ಸೀತೆ ಇಬ್ಬರನ್ನೂ ನಿರಾಪರಾಧಿಗಳನ್ನಾಗಿ ಚಿತ್ರಿಸುವ ಇರಾದೆ ಇರುವುದರಿಂದಲೆ ಈ ನಾಟಕದಲ್ಲಿ ಸೂರ್ಪನಕಿಯನ್ನು ಹೀಗೆ ರೂಪಿಸ ಲಾಗಿದೆ. ವಿವಾಹವಾದ ಪುರುಷನನ್ನು (ರಾವಣನನ್ನು) ಸೀತೆ ಮೋಹಿಸುವುದಿರಲಿ ಮನದಲ್ಲು ನೆನಪಿಸಿಕೊಳ್ಳಬಾರದು. ಹಾಗೆಯೇ ವಿವಾಹವಾದ ಪುರುಷನನ್ನು (ರಾಮನನ್ನು) ಸೂರ್ಪನಕಿ ಕೂಡ ಮದುವೆ ಮಾಡಿಕೊಳ್ಳಲಾಗದು. ಸೀತೆ ಪತಿವ್ರತೆ;

ಆದರೆ ಸೂರ್ಪನಕಿ ಸಂಚುಗಾತಿ. ಹಾಗಾಗಿಯೆ ಸೀತಾ ಪರಿತ್ಯಾಗ ನಡೆಯುತ್ತದೆ. ಹೀಗೆ ಈ ಚಿತ್ರಪಟ ರಾಮಾಯಣ ದೊಡ್ಡಾಟವು ಸೀತೆ ಮತ್ತು ಸೂರ್ಪನಕಿ ಈ ಎರಡೂ ಪಾತ್ರಗಳನ್ನು ಗಂಡನ್ನು ರಕ್ಷಿಸುವ ಕೆಲಸಕ್ಕೆ ದುಡಿಸಿಕೊಂಡಿದೆ.

ಸೀತೆಯೋ, ಸೂರ್ಪನಕಿಯೊ ಅಂತು ತಪ್ಪು ಗಂಡಿನದಲ್ಲ. ಹೆಣ್ಣಿನದೇ. ಹೆಣ್ಣನ್ನು ಸದಾ ಕಟಕಟೆಯಲ್ಲಿ ನಿಲ್ಲಿಸಬೇಕು ಅಷ್ಟೆ. ಹೆಣ್ಣಿಗೆ ಹೆಣ್ಣೇ ಶತ್ರು ಎಂದು ಹೇಳುವ ಜನಪದ ಗಂಡು ಪಥ್ಯದಂತೆ ಈ ನಾಟಕ ಇದೆ. ಸೀತೆ ಮತ್ತು ಸೂರ್ಪನಕಿ ಎಂಬ ಎರಡು ಪ್ರಧಾನ ಹೆಣ್ಣು ಮಾದರಿಗಳನ್ನು ನೀಡಿ ಈ ಎರಡರಲ್ಲಿ ನಿಮ್ಮ ಆಯ್ಕೆ ಯಾವುದು ಹೇಳಿ ಎಂಬ ಪ್ರಶ್ನೆಯನ್ನು ಗಂಭೀರವಾಗಿ ಹೆಣ್ಣು ಸಮುದಾಯದ ಮುಂದೆ ಎಸೆಯುವ ನಾಟಕ ಇದು.

ಆಕರ ಗ್ರಂಥಗಳು

1. ಚಿತ್ರಪಟ ರಾಮಾಯಣ (ದೊಡ್ಡಾಟ): ಸಂ. ಮುದೇನೂರ ಸಂಗಣ್ಣ, 1985, ಪ್ರಾದೇಶಿಕ ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ.
2. ಹೆಳವನಕಟ್ಟೆ ಗಿರಿಯಮ್ಮನ ಕೀರ್ತನೆಗಳು: ಲೀಲಾವತಿ ಎಸ್. ರಾವ್., ಸಮಗ್ರ ದಾಸ ಸಾಹಿತ್ಯ ಸಂಪುಟ ಸಂ–18, 2003, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.